**SC No. 257/2021**
**PW-16**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್. ಸಿ. 257/2021

| | | |
|---|---|---|
| ಸಾಕ್ಷಿದಾರರ ಹೆಸರು | ಶ್ರೀನಿವಾಸ್ ಎಲ್. | ಪ್ರಮಾಣ ವಚನ ಮಾಡಿದ ದಿನಾಂಕ: **17.12.2025** |
| ತಂದೆಯ/ಗಂಡನ ಹೆಸರು | ಲಿಂಗಯ್ಯ | |
| ವಯಸ್ಸು | 62 ವರ್ಷ | |
| ವೃತ್ತಿ | ನಿವೃತ್ತ ಪೊಲೀಸ್ ಇನ್ಸ್‌ಪೆಕ್ಟರ್ | ಪ್ರಾ.ಸಾಃ 16 |
| ವಾಸ ಸ್ಥಳ | ಮೈಸೂರು | ಚಾ.ಸಾಃ 20 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ಮೈಸೂರಿನ ಕೃಷ್ಣರಾಜ ಪೊಲೀಸ್ ಠಾಣೆಯಲ್ಲಿ ದಿನಾಂಕ *17.07.2019* ರಿಂದ *12.02.2021* ರವರೆಗೆ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿದ್ದೇನು.

ದಿನಾಂಕ 05.10.2020 ರಂದು ಸಂಜೆ 7.00 ಗಂಟೆ ಸಮಯದಲ್ಲಿ ನಾನು ಠಾಣೆಯ ಪ್ರಭಾರದಲ್ಲಿ ಇದ್ದಾಗ ಈ ಕೇಸಿನ ಪಿರ್ಯಾದಿ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ಪಿರ್ಯಾದನ್ನು ಸ್ವೀಕರಿಸಿ ಠಾಣಾ ಮೊ.ಸಂಖ್ಯೆ 97/2020 ಕಲಂ 341, 323, 307 ಸಹಕಲಂ 34 ಐಪಿಸಿ ರೀತ್ಯ ಮೊಕದ್ದಮೆ ದಾಖಲಿಸಿ ಕೊಂಡು ಪ್ರ.ವ.ವರದಿ ಮತ್ತು ದೂರನ್ನು ನ್ಯಾಯಾಲಯಕ್ಕೆ ಸದರಿ ಪ್ರತಿಗಳನ್ನು ನಮ್ಮ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿದ್ದೇನು. ಸಾಕ್ಷಿದಾರರು ದೂರನ್ನು ನೋಡಿ

ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ.1 (ಬಿ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.17 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ.17(ಎ) ಎಂದು ಗುರುತಿಸಲಾಯಿತು.

ದಿನಾಂಕ 06.10.2020 ರಂದು ಕೃತ್ಯ ನಡೆದ ಸ್ಥಳ ಜೆ.ಎಸ್.ಎಸ್ ಆಸ್ಪತ್ರೆಯ ಮುಂಭಾಗ ಎಂ.ಜಿ ರಸ್ತೆಗೆ ನಾನು ಮತ್ತು ಸಿಬ್ಬಂದಿಯವರು ಕೃತ್ಯ ನಡೆದ ಸ್ಥಳದ ಮಹಜರ್ ಮಾಡಲು ಹೋಗಿದ್ದೆವು. ಕೃತ್ಯ ನಡೆದ ಸ್ಥಳ ದಲ್ಲಿ ಪಿರ್ಯಾದುದಾರರಾದ ನವೀನ್ ಕುಮಾರ್ ಚಾಸಾ-*1* ರವರು ಹಾಜರಿದ್ದು ಕೃತ್ಯ ನಡೆದ ಸ್ಥಳ ಇದೇ ಎಂದು ತೋರಿಸಿದ್ದು ಆ ಸ್ಥಳ ದಲ್ಲಿ ಪಂಚಾಯಿತಿದಾರರಾದ ಮಂಜು ಮತ್ತು ಲಕ್ಷ್ಮಿ ನರಸಿಂಹರಾಜ್ ರವರನ್ನು ಪಂಚಾಯಿತಿದಾರರಾಗಿ ನೇಮಕ ಮಾಡಿಕೊಂಡು ಕೇಸಿನ ಬಗ್ಗೆ ವಿಚಾರವನ್ನು ತಿಳಿಸಿದ್ದೆನು. ಸದರಿಯವರು ಪಂಚರಾಗಲು ಒಪ್ಪಿದ್ದು ಪಂಚಾಯಿತಿದಾರರ ಸಮಕ್ಷಮ ಮಹಜರ್ ಕ್ರಮವನ್ನು ಕೈಗೊಂಡಿದ್ದೆನು. ಕೃತ್ಯ ನಡೆದ ಸ್ಥಳ ದಲ್ಲಿ ರಕ್ತದ ಕಲೆಯಾಗಿರುವ ರಸ್ತೆಯ ಡಾಂಬರ್ ಚೂರುಗಳು ಮತ್ತು ಸಾಧಾ ಡಾಂಬರ್ ಚೂರುಗಳು ಹಾಗೂ ಪಿರ್ಯಾದಿಯವರು ಕೃತ್ಯ ನಡೆದ ಸಂದರ್ಭದಲ್ಲಿ ಧರಿಸಿದ್ದ ಒಂದು ನೀಲಿ ಬಣ್ಣದ ಟೀ ಶರ್ಟ್ ಅನ್ನು ಹಾಜರುಪಡಿಸಿದ್ದು ಅದನ್ನು ಪರಿಶೀಲಿಸಲಾಗಿ ಅದು ಅರ್ಧ ತೋಳಿನ ಟೀ ಶರ್ಟ್ ಆಗಿದ್ದು ರಕ್ತದ ಕಲೆಯಾಗಿತ್ತು. ಈ ಮೇಲ್ಕಂಡ ವಸ್ತುಗಳನ್ನು ಪ್ರತ್ಯೇಕವಾಗಿ ಪ್ಲಾಸ್ಟಿಕ್ ಕವರ್

ನಲ್ಲಿ ಹಾಕಿ ಬಿಳಿಯ ಬಟ್ಟೆಯ ಕೈ ಚೀಲದಲ್ಲಿ ಹಾಕಿ ಹೊಲೆದು ವಿ ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲು ಮಾಡಿದ್ದೆನು. ಮಹಜರ್ ಅನ್ನು ಬೆಳಗ್ಗೆ *10.30* ಗಂಟೆಯಿಂದ *11.15* ಗಂಟೆಯವರೆಗೆ ಬರೆದಿದ್ದೆ. ಸದರಿ ಮಾಲನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ *96/2020* ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೆ. ಸಾಕ್ಷಿದಾರರು ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*2* ಎಂದು ಗುರುತಿಸಲ್ಪಟ್ಟಿದು, ಸಾಕ್ಷಿದಾರರ ಸಹಿಯನ್ನು ನಿಪಿ.*2* *(ಡಿ)* ಎಂದು ಗುರುತಿಸಲಾಯಿತು. ನಾನು ಪಂಚನಾಮೆಯಡಿಯಲ್ಲಿ ಅಮಾನತ್ತು ಪಡಿಸಿಕೊಂಡಿದ್ದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನ್ಯಾಯಾಲಯದ ಮುಂದಿರುವ ವಸ್ತುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂ.ಓ-*2* ರಿಂದ *4* ಅಂತ ಗುರುತಿಸಲ್ಪಟ್ಟಿರುತ್ತವೆ.

ಅದೇ ದಿನ ಈ ಕೇಸಿನ ಪ್ರತ್ಯಕ್ಷ ಸಾಕ್ಷಿದಾರರಾದ ಎಂ.ಬಿ. ಪವನ್ ಕುಮಾರ್ ಮತ್ತು ಎಸ್. ರಮೇಶ್ ಹಾಗೂ ಪಂಚಾಯಿತಿದಾರರಾದ ಮಂಜು ಹಾಗೂ ಲಕ್ಷ್ಮಿನರಸಿಂಹರಾಜು ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೆನು. ಪ್ರಾಸಾ-*8* ಮತ್ತು *9* ರವರು ನನ್ನ ಮುದೆ ನಿಪಿ- *7* ಮತ್ತು *8* ರಂತೆ ಹೇಳಿಕೆಯನ್ನು ಕೊಟ್ಟಿದ್ದರು. ಸಾಕ್ಷಿ ನುಡಿದ ಬಗ್ಗೆ ಮುಚ್ಚಳಿಕೆಯನ್ನು ಬರೆಸಿಕೊಂಡಿದ್ದೆನು.

ದಿನಾಂಕ *07.10.2020* ರಂದು ಈ ಕೇಸಿನ ಪ್ರತ್ಯಕ್ಷ ಸಾಕ್ಷಿ ವಿಜಯ ಬಿನ್ ಲೇಟ್ ಗೋಪಿ ರವರ ಹೇಳಿಕೆಯನ್ನು ಪಡೆದುಕೊಂಡಿದ್ದೆನು. ಸದರಿಯವರು ನನ್ನ ಮುಂದೆ ನಿಪಿ-

*6* ರ ಪ್ರಕಾರ ಹೇಳಿಕೆ ಕೊಟ್ಟಿದ್ದರು.

ದಿನಾಂಕ *09.10.2020* ರಂದು ಕೃತ್ಯ ನಡೆದ ಸ್ಥಳದ ನಕಾಶೆ ತಯಾರಿಸಿ ಕೊಡಲು ವಲಯ ಆಯುಕ್ತಕರು, ವಲಯ ಕಛೇರಿ –*1* ಮೈಸೂರು ಮಹಾ ನಗರ ಪಾಲಿಕೆಗೆ ಮತ್ತು ಕೃತ್ಯ ನಡೆದ ದಿನ ಸ್ಥಳ ದಲ್ಲಿ ವಿದ್ಯುತ್ ಸಂಪರ್ಕ ಇರುವಿಕೆಯ ಬಗ್ಗೆ ಮಾಹಿತಿ ನೀಡುವಂತೆ ಕಾರ್ಯಪಾಲಕ ಅಭಿಯಂತರರು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಚಾಮುಂಡಿಪುರಂ ಮೈಸೂರು ರವರಿಗೆ ಮನವಿ ಪತ್ರವನ್ನು ಸಲ್ಲಿಸಿದ್ದೆನು.

ದಿನಾಂಕ *11.10.2020* ರಂದು ಪಿರ್ಯಾದಿ ನವೀನ್ ಕುಮಾರ್ ರವರು ಚಿಕಿತ್ಸೆ ಪಡೆದಿರುವ ಬಾನವಿ ಆಸ್ಪತ್ರೆ ಕುವೆಂಪುನಗರ ವೈದ್ಯಾಧಿಕಾರಿಯವರಿಗೆ ಗಾಯದ ಪ್ರಮಾಣ ಪತ್ರವನ್ನು ಕೊಡುವಂತೆ ಮನವಿ ಪತ್ರವನ್ನು ನಿವೇದಿಸಿಕೊಂಡಿದ್ದೆನು.

ದಿನಾಂಕ *21.10.2020* ರಂದು *1* ನೇ ಆರೋಪಿ ಅಂಬರೀಶ್ ಈತ ಚಾಮುಂಡಿ ಬೆಟ್ಟದ ಪಾದದ ಬಳಿ ಇರುವುದಾಗಿ ಬಾತ್ಮಿದಾರರಿಂದ ಖಚಿತ ಬಾತ್ಮಿ ಬಂದ ಮೇರೆಗೆ ನಾನು, ಹೆಚ್.ಸಿ *412,* ಪಿಸಿ *850* ಶರತ್ ಕುಮಾರ್ ರವರೊಂದಿಗೆ ಹೋಗಿ ಆರೋಪಿ ಅಂಬರೀಶ್ ನನ್ನು ಮಧ್ಯಾಹ್ನ *12.30* ಗಂಟೆ ಸಮಯದಲ್ಲಿ ವಶಕ್ಕೆ ಪಡೆದುಕೊಂಡು ಮಧ್ಯಾಹ್ನ *1.00* ಗಂಟೆಗೆ ಠಾಣೆಗೆ ಕರೆದುಕೊಂಡು ಬಂದಿದ್ದೆನು. ಠಾಣೆಯಲ್ಲಿ ಆರೋಪಿತನನ್ನು ವಿಚಾರಣೆ ಮಾಡಿ ಆತನ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿದ್ದೆನು. ಮಧ್ಯಾಹ್ನ *1.30* ಗಂಟೆಗೆ ಆರೋಪಿತನನ್ನು ದಸ್ತಗಿರಿ ಮಾಡಿಕೊಂಡು ದಸ್ತಗಿರಿ ಕ್ರಮ

ಅನುಸರಿಸಿಕೊಂಡಿದ್ದೆನು. ಆರೋಪಿಯ ಬೆಂಗಾವಲಿಗಾಗಿ ಪಿಸಿ *850* ಶರತ್ ಕುಮಾರ್ ನನ್ನು ನೇಮಿಸಿದ್ದೆನು. ಆರೋಪಿತನ ಅಂಗಶೋಧನೆ ಮಾಡುವ ಸಂದರ್ಭದಲ್ಲಿ ಆತನ ಪ್ಯಾಂಟಿನ ಜೇಬಿನಲ್ಲಿ ಒಂದು ರೇಜರ್ ಪತ್ತೆಯಾಗಿದ್ದು ಈ ಬಗ್ಗೆ ವಿಚಾರಣೆ ಮಾಡಲಾಗಿ ಇದೇ ರೇಜರ್ ನಿಂದ ಪಿರ್ಯಾದಿ ನವೀನ್ ಕುಮಾರ್ ರವರಿಗೆ ಗಾಯಗೊಳಿಸಿದ್ದು ಎಂದು ಆರೋಪಿ ಒಪ್ಪಿಕೊಂಡಿದ್ದೆನು. ಸದರಿ ರೇಜರ್ ಅನ್ನು ಪೊಲೀಸ್ ಠಾಣೆಯಲ್ಲಿ ಪಂಚಾಯಿತಿದಾರರಾದ ಗುರುರಾಜ್ ಮತ್ತು ಪ್ರವೀಣ್ ರವರ ಸಮಕ್ಷಮ ಮಹಜರ್ ಕ್ರಮ ಕೈಗೊಂಡು ಸದರಿ ರೇಜರ್ ಅನ್ನು ಪರೀಕ್ಷಿಸಲಾಗಿ ರೇಜರ್ ಓಪನ್ ಮಾಡಿದಾಗ *24* ಇಂಚು ಉದ್ದ ಪ್ಲಾಸ್ಟಿಕ್ ಹಿಡಿಯ ಭಾಗ *12* ಇಂಚು ಉದ್ದ ಇರುತ್ತದೆ. ಅದನ್ನು ಪ್ರತ್ಯೇಕವಾಗಿ ಒಂದು ಕೈ ಚೀಲದಲ್ಲಿ ಹಾಕಿ ಹೊಲೆದು ಪಂಚಾಯಿತಿದಾರರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿದ್ದೆನು. ಸದರಿ ಅಮಾನತ್ತು ಪಂಚನಾಮೆಯನ್ನು ಮಧ್ಯಾಹ್ನ *2.00* ಗಂಟೆಯಿಂದ *2.45* ಗಂಟೆಯವರೆಗೆ ಬರೆಯಲಾಗಿತ್ತು. ಸಾಕ್ಷಿದಾರರು ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*9* ಎಂದು ಗುರುತಿಸಲ್ಪಟ್ಟಿದು, ಸಾಕ್ಷಿದಾರರ ಸಹಿಯನ್ನು ನಿಪಿ.*9 (ಸಿ)* ಎಂದು ಗುರುತಿಸಲಾಯಿತು. ನಾನು ರೇಜರ್ ಅನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನ್ಯಾಯಾಲಯದ ಮುಂದಿರುವ ರೇಜರ್ ಅನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಎಂ.ಒ–*1* ಎಂದು ಗುರುತಿಸಲ್ಪಟ್ಟಿರುತ್ತದೆ. ಸದರಿ ರೇಜರ್ ಅನ್ನು ಮಾಲು ಪಟ್ಟಿ ಸಂಖ್ಯೆ *102/2020*

ರಲ್ಲಿ ನಮೂದಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೆನು. ಅದೇ ದಿನ ಮಧ್ಯಾಹ್ನ *3.00* ಗಂಟೆ ಸಮಯಕ್ಕೆ ನಾನು ಪಿರ್ಯಾದಿಯವರಿಗೆ ಫೋನ್ ಮಾಡಿ ಠಾಣೆಗೆ ಬರುವಂತೆ ತಿಳಿಸಿದ್ದೆನು. ಪಿರ್ಯಾದುದಾರರು ಠಾಣೆಗೆ ಹಾಜರಾಗಿ ಆರೋಪಿ ಮತ್ತು ಕೃತ್ಯಕ್ಕೆ ಬಳಸಿದ್ದ ರೇಜರ್ ಅನ್ನು ನೋಡಿ ಗುರುತಿಸಿದ್ದರು. ಈ ಬಗ್ಗೆ ಪಿರ್ಯಾದಿದಾರರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿದ್ದೆನು. ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಕಳುಹಿಸಿಕೊಟ್ಟಿದ್ದು ರಿಮ್ಯಾಂಡ್ ಅರ್ಜಿಯೊಂದಿಗೆ ನಮ್ಮ ಸಿಬ್ಬಂದಿಯವರಾದ ಪಿಸಿ *196* ಮತ್ತು ಪಿಸಿ *850* ಇವರ ಬೆಂಗಾವಲಿನಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೆನು. ನಾನು *1* ನೇ ಆರೋಪಿ ಅಂಬರೀಶ್ ನನ್ನು ನೋಡಿದರೆ ಗುರುತಿಸುತ್ತೇನೆ, ಸಾಕ್ಷಿದಾರರು ನ್ಯಾಯಾಲಯದ ಮುಂದೆ ಹಾಜರಿರುವ ಅಂಬರೀಶ್ ರವರನ್ನು ನೋಡಿ ಗುರುತಿಸಿರುತ್ತಾರೆ.

ದಿನಾಂಕ *24.10.2020* ರಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದವರು ಕೃತ್ಯ ನಡೆದ ಸ್ಥಳ ದಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ದೃಡೀಕರಣ ಪತ್ರವನ್ನು ನೀಡಿದ್ದರು ಅದನ್ನು ಸ್ವೀಕರಿಸಿ ಕಡತದಲ್ಲಿ ಅಳವಡಿಸಿಕೊಂಡಿದ್ದೆನು. ಸಾಕ್ಷಿದಾರರು ದೃಡೀಕರಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*14* ಎಂದು ಗುರುತಿಸಲ್ಪಟ್ಟಿದು, ಸಾಕ್ಷಿದಾರರ ಸಹಿಯನ್ನು ನಿಪಿ. *14(ಬಿ)* ಎಂದು ಗುರುತಿಸಲಾಯಿತು.

ದಿನಾಂಕ *31.10.2020* ರಂದು ಗಾಯಾಳು ನವೀನ್ ಕುಮಾರ್ ರವರ

ಗಾಯದ ಪ್ರಮಾಣ ಪತ್ರವನ್ನು ಬಾನವಿ ಆಸ್ಪತ್ರೆಯಿಂದ ಠಾಣೆಯ ಸಿಬ್ಬಂದಿ ಪಿಸಿ *23* ಮಂಜುನಾಥ್ ರವರು ತೆಗೆದುಕೊಂಡು ಬಂದು ಹಾಜರುಪಡಿಸಿದ್ದನ್ನು ಸ್ವೀಕರಿಸಿ ಕಡತದಲ್ಲಿ ಅಳವಡಿಸಿಕೊಂಡಿದ್ದೆನು. ಸಾಕ್ಷಿದಾರರು ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*11* ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ.*11 (ಬಿ)* ಎಂದು ಗುರುತಿಸಲಾಯಿತು.

ದಿನಾಂಕ *31.10.2020* ರಂದು ಮಾಲು ಪಟ್ಟಿ ಸಂಖ್ಯೆ *96/2020* ಮಾಲು ಪಟ್ಟಿ ಸಂಖ್ಯೆ *102/2020* ಮಾಲುಗಳನ್ನು ಉಪನಿರ್ದೇಶಕರು, ಪ್ರದೇಶಿಕ ವಿಧಿ ವಿಜ್ಞಾನ ಪ್ರಯೋಗಾಲಯ ಮೈಸೂರು ರವರಿಗೆ ಪಿಸಿ *23* ಮಂಜುನಾಥ್ ರವರ ಮುಖಾಂತರ ಪಾಸ್ ಫೋರ್ಟ್ ನೊಂದಿಗೆ ಕಳುಹಿಸಿಕೊಟ್ಟಿದ್ದೆನು. ಸಾಕ್ಷಿದಾರರು ಪಾಸ್ ಫೋರ್ಟ್ ನೋಡಿ ಗುರುತಿಸಿದ್ದು ಅದನ್ನು ನಿಪಿ-*18* ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-*18(ಎ)* ಎಂದು ಗುರುತಿಸಲಾಯಿತು.

ದಿನಾಂಕ *04.11.2020* ರಂದು *RFSL* ನಿಂದ ಸ್ವೀಕೃತಿ ಪಡೆದ ಬಗ್ಗೆ ಪಿಸಿ ಮಂಜುನಾಥ್ ರವರು ದಾಖಲೆ ತಂದು ಹಾಜರುಪಡಿಸಿದ್ದರು ಅದನ್ನು ಕಡತದಲ್ಲಿ ಅಳವಡಿಸಿಕೊಂಡಿದ್ದೆನು.

ದಿನಾಂಕ *05.11.2020* ರಂದು ಈ ಕೇಸಿನ ಸಾಕ್ಷಿದಾರರಾದ ಎಂ.ಎಸ್. ರಾಜ್ ಕುಮಾರ್, ವಿಜಯಶಂಕರ್, ಕುಶಾಲ್ ಕಶ್ಯಪ ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೆನು.

ಫ್ರಾಸಾ–*4* ರಿಂದ *6* ರವರು ನನ್ನ ಮುಂದೆ ನಿಪಿ–*3* ರಿಂದ *5* ರ ಪ್ರಕಾರ ಹೇಳಿಕೆಗಳನ್ನು ಕೊಟ್ಟಿದ್ದರು.

ದಿನಾಂಕ *07.11.2020* ರಂದು ವಲಯ ಆಯುಕ್ತಕರು ವಲಯ ಕಛೇರಿ–*1* ರವರು ಕೃತ್ಯ ನಡೆದ ಸ್ಥಳದ ನಕಾಶೆ ತಯಾರಿಸಿ ನಕ್ಷೆ ಯ ಪ್ರತಿಯನ್ನು ಪಿಸಿ *23* ಮಂಜುನಾಥ್ ರವರ ಮುಖಾಂತರ ಹಾಜರುಪಡಿಸಿದ್ದು ಅದನ್ನು ಪರಿಶೀಲಿಸಿ ಕಡತದಲ್ಲಿ ಅಳವಡಿಸಿಕೊಂಡಿದ್ದೆನು. ಸಾಕ್ಷಿದಾರರು ಕವರಿಂಗ್ ಲೆಟರ್ ಮತ್ತು ನಕ್ಷೆ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ–*19* ಮತ್ತು *20* ಎಂದು ಸಾಕ್ಷಿದಾರರ ಸಹಿಯನ್ನು ನಿಪಿ–*19(ಎ)* ಎಂದು ಗುರುತಿಸಲಾಯಿತು.

ದಿನಾಂಕ *08.11.2020* ರಂದು ಗುರುಸ್ವಾಮಿ ಬ್ರೇಜ ಕಾರಿನ ಮಾಲೀಕರು ಇದ್ದು ಅವರ ಹೇಳಿಕೆಯನ್ನು ಪಡೆದುಕೊಂಡಿದ್ದೆನು. ಸದರಿಯವರು ನನ್ನ ಮುಂದೆ ನಿಪಿ–*10* ರಂತೆ ಹೇಳಿಕೆಯನ್ನು ಕೊಟ್ಟಿದ್ದರು.

ದಿನಾಂಕ *10.11.2020* ರಂದು ಈ ಕೇಸಿನ *2* ನೇ ಆರೋಪಿ ಸುರೇಶ್ ಸ್ವಾಮಿ ಇವರು ಮೈಸೂರಿನ ಜಿಲ್ಲಾ ಸತ್ರ ನ್ಯಾಯಾಲಯದಿಂದ ನಿರೀಕ್ಷಣ ಜಾಮೀನನ್ನು ಪಡೆದುಕೊಂಡು ಬಂದು ಹಾಜರಾದ ಮೇಲೆ ಆದೇಶದ ದೃಡೀಕೃತ ಪ್ರತಿಯನ್ನು ಪಡೆದುಕೊಂಡಿದ್ದೆನು. ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡು ನ್ಯಾಯಾಲಯದ ಆದೇಶದಂತೆ ಮಂಜು ಮತ್ತು ಪುಟ್ಟಣ ರವರ ಜಾಮೀನನ್ನು

ಪಡೆದುಕೊಂಡು ಆರೋಪಿತನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದೆನು.

ದಿನಾಂಕ *23.11.2020* ರಂದು ಬಾನವಿ ಆಸ್ಪತ್ರೆಯಿಂದ *accidental extract register* ಅನ್ನು ಪಿರ್ಯಾದಿ ನವೀನ್ ಕುಮಾರ್ ರವರು ಹಾಜರುಪಡಿಸಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿದ್ದೆನು. ಸಾಕ್ಷಿದಾರರು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-*21* ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-*21(ಎ)* ಎಂದು ಗುರುತಿಸಲಾಯಿತು.

ದಿನಾಂಕ *24.11.2020* ರಂದು *RFSL* ನಿಂದ ರಕ್ತದ ಕಲೆಯಾಗಿರುವ ಡಾಂಬರ್ ಚೂರುಗಳು, ಸಾಧಾ ಡಾಂಬರ್ ಚೂರುಗಳು ಮತ್ತು ನೀಲಿ ಬಣ್ಣದ ಅರ್ಧ ತೋಳಿನ ಟೀಶರ್ಟ್ ಮತ್ತು ರೇಜರ್ ಇವುಗಳನ್ನು ಠಾಣಾ ಸಿಬ್ಬಂದಿ ಮಂಜುನಾಥ್ ರವರು ವಾಪಸ್ಸು ತಂದು ಹಾಜರುಪಡಿಸಿದ್ದರು.

ದಿನಾಂಕ *25.11.2020* ರಂದು ಆರೋಪಿಯಿಂದ ಅಮಾನತ್ತು ಪಡಿಸಿಕೊಂಡಿದ್ದ ಕೃತ್ಯಕ್ಕೆ ಉಪಯೋಗಿಸಿದ್ದ ರೇಜರ್ ಅನ್ನು ಫ್ರಾಸಾ-*1* ನವೀನ್ ಕುಮಾರ್ ರವರಿಗೆ ಆಗಿರುವ ಗಾಯವು ಈ ರೇಜರ್ ನಿಂದ ಆಗಿದೆಯೇ ಅಂತ ಸ್ಪಷ್ಟ ಅಭಿಪ್ರಾಯವನ್ನು ನೀಡುವಂತೆ ವೈದ್ಯಾಧಿಕಾರಿಗಳು ಬಾನವಿ ಆಸ್ಪತ್ರೆಗೆ ಮನವಿ ಪತ್ರದೊಂದಿಗೆ ನಿವೇದಿಸಿಕೊಂಡಿದ್ದೆನು.

ಅದೇ ದಿನ ಪಿಸಿ *23* ಮಂಜುನಾಥ್ ರವರು *FSL* ರಿಪೋರ್ಟ್ ಹಾಗೂ ಸ್ಯಾಂಪಲ್ ಸೀಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿದ್ದೆನು.

ಸಾಕ್ಷಿದಾರರು *FSL* ರಿಪೋರ್ಟ್ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ. *15* ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ.*15(ಬಿ)* ಎಂದು ಗುರುತಿಸಲಾಯಿತು. ಸಾಕ್ಷಿದಾರರು ಸ್ಯಾಂಪಲ್ ಸೀಲು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*16* ಎಂದು ಗುರುತಿಸಲ್ಪಟ್ಟಿರುತ್ತದೆ.

ದಿನಾಂಕ *26.11.2020* ರಂದು ಬಾನವಿ ಆಸ್ಪತ್ರೆ ಯ ವೈಧಾಧಿಕಾರಿಯವರು ನವೀನ್ ಕುಮಾರ್ ಗೆ ಆಗಿರುವ ಗಾಯ *sharp knife or razor* ನಿಂದ ಆಗಿರಬಹುದು ಎಂದು ತಮ್ಮ ಅಭಿಪ್ರಾಯದ ವರದಿಯನ್ನು ನೀಡಿದ್ದರು. ಸಾಕ್ಷಿದಾರರು ಅಭಿಪ್ರಾಯದ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*12* ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ.*12(ಬಿ)* ಎಂದು ಗುರುತಿಸಲಾಯಿತು.

ತನಿಖೆ ಪೂರ್ಣಗೊಂಡಿದ್ದು ದಿನಾಂಕ *26.11.2020* ರಂದು ಆರೋಪಿತರದ *1* ನೇ ಆರೋಪಿ ಅಂಬರೀಶ್ ಮತ್ತು *2* ನೇ ಆರೋಪಿ ಸುರೇಶ್ ಸ್ವಾಮಿ ರವರ ವಿರುದ್ಧ ಕಲಂ *341, 323, 307* ಸಹ ಕಲಂ *34* ಐಪಿಸಿ ರೀತ್ಯ ದೋಷಾರೋಪಣಾ ಪತ್ರವನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೆನು.

**ಪಾಟೀ ಸವಾಲುಃ 1 ನೇ ಆರೋಪಿ ಪರ ವಕೀಲರಿಂದ** :

ನಮ್ಮ ಠಾಣೆಯಿಂದ ಅಗ್ರಹಾರ ಸರ್ಕಲ್ ಗೆ ಸುಮಾರು 100–150 ಅಡಿ ಅಂತರ ಇರುತ್ತದೆ ಎಂದರೆ ಇರಬಹುದು. ಅಗ್ರಹಾರ ಸರ್ಕಲ್ ನಿಂದ ಪಾತಾಳ ಆಂಜನೇಯ

ದೇವಸ್ಥಾನ ಸರ್ಕಲ್ ಗೆ 300–350 ಅಡಿ ಅಂತರ ಇರುತ್ತದೆ ಎಂದರೆ ಇರಬಹುದು. ಆ ದೇವಸ್ಥಾನದಿಂದ ಜೆ.ಎಸ್.ಎಸ್. ಆಸ್ಪತ್ರೆಯ ಮುಂಭಾಗ ಇರುವ ಚಾಮುಂಡೇಶ್ವರಿ ದೇವಸ್ಥಾನಕ್ಕೆ 200–250 ಅಡಿ ಅಂತರ ಇರುತ್ತದೆ ಎಂದರೆ ಇರಬಹುದು. ಜೆ.ಎಸ್.ಎಸ್. ಆಸ್ಪತ್ರೆಯ ಪಕ್ಕದಲ್ಲಿ ಒಂದು ಕಲ್ಯಾಣ ಮಂಟಪ ಇರುತ್ತದೆ ಎಂದರೆ ಸರಿ. ಕಲ್ಯಾಣ ಮಂಟಪದ ಒಳಗೆ ಹೋಗಬೇಕಾದರೆ ಆಸ್ಪತ್ರೆಯ ಮುಖ್ಯ ದ್ವಾರದಿಂದ ಹೋಗಬೇಕಾಗುತ್ತದೆ ಎಂದರೆ ಸರಿ. ಜೆ.ಎಸ್.ಎಸ್. ಆಸ್ಪತ್ರೆಯ ಮುಂಭಾಗದಿಂದ ಮಾರ್ಕೆಟ್ ವರೆಗೆ ರಸ್ತೆಯ ಮಧ್ಯದಲ್ಲಿ ಡಿವೈಡರ್ ಹಾಕಿರುತ್ತದೆ ಎಂದರೆ ಸರಿ. ಜೆ.ಎಸ್.ಎಸ್. ಆಸ್ಪತ್ರೆಯಿಂದ ಮತ್ತು ಚೌಟ್ರಿಯ ಮಧ್ಯದಲ್ಲಿ ಮುಳ್ಳಿನ ತಂತಿ ಮತ್ತು ತಗಡನ್ನು ಅಳವಡಿಸಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಮಾರುಕಟ್ಟೆ ಕಡೆಯಿಂದ ಜೆ.ಎಸ್.ಎಸ್. ಆಸ್ಪತ್ರೆ ಕಡೆ ಬರುವ ರಸ್ತೆಯ ಎಡ ಭಾಗಕ್ಕೆ ನಾನು ಹೇಳುವಂತಹ ಕೃತ್ಯದ ಸ್ಥಳ ಇತ್ತು. ಜೆ.ಎಸ್.ಎಸ್. ಆಸ್ಪತ್ರೆಯಿಂದ ಪಾತಾಳ ಆಂಜನೇಯ ಸ್ವಾಮಿ ದೇವಸ್ಥಾನದವರೆಗೆ ಯಾವುದೇ ಟೀ ಅಂಗಡಿಗಳು ಇರುವುದಿಲ್ಲ ಎಂದರೆ ಸರಿ ಆದರೆ ರಾತ್ರಿ ವೇಳೆಯಲ್ಲಿ ಸೈಕಲ್ ನಲ್ಲಿ ಫ್ಲಾಸ್ಕ್ ನಲ್ಲಿ ಟೀ ತೆಗೆದುಕೊಂಡು ಬಂದು ಆಟೋ ಸ್ಟಾಂಡ್ ಹತ್ತಿರ ನಿಂತುಕೊಂಡು ಮಾರಾಟ ಮಾಡುತ್ತಾರೆ. ಆ ರೀತಿ ನಿಂತುಕೊಂಡು ಟೀ ಮಾರಾಟ ಮಾಡಿದರೆ ಅಲ್ಲಿ ಸಾಕಷ್ಟು ಜನ ಸೇರುತ್ತಾರೆ ಎಂದರೆ ಸರಿಯಲ್ಲ. ಬಂದು ಬಂದು ಕುಡಿದು ಹೋಗುತ್ತಾರೆ. ಯಾವುದೇ ಪರವಾನಿಗೆ ಇಲ್ಲದೆ ಸೈಕಲ್ ಮೇಲೆ ಫ್ಲಾಸ್ಕ್ ನಲ್ಲಿ ಟೀ ತಂದು ಮಾರಾಟ ಮಾಡುವುದು ಕಾನೂನು ಬಾಹಿರ

ಎಂದರೆ ಇರಬಹುದು. ನಾನು ಟೀ ಮಾರಾಟ ಮಾಡಲು ಅನುಮತಿ ನೀಡಿರಲಿಲ್ಲ.

ನಮ್ಮ ಠಾಣೆಯನ್ನು ಬಿಟ್ಟ ಮೇಲೆ ಅಗ್ರಹಾರ ಸರ್ಕಲ್ ನಲ್ಲಿ ಯಾವಾಗಲೂ ಪೊಲೀಸ್ ಸಿಬ್ಬಂದಿ ಇರುತ್ತಾರೆ ಎಂದರೆ ರಾತ್ರಿ ವೇಳೆಯಲ್ಲಿ ಗಸ್ತಿನಲ್ಲಿ ಇದ್ದಂತಹ ಪೊಲೀಸರು ಅಲ್ಲಿ ಹೋಗುತ್ತಾರೆ. 24 ಗಂಟೆಗಳಲ್ಲಿ ಆ ಸರ್ಕಲ್ ನಲ್ಲಿ ಪೊಲೀಸ್ ಸಿಬ್ಬಂದಿ ಇರುವುದಿಲ್ಲ. ಪಾತಾಳ ಆಂಜನೇಯ ಸ್ವಾಮಿ ದೇವಸ್ಥಾನದ ಹತ್ತಿರವೂ ಸಹ ನಮ್ಮ ಸಿಬ್ಬಂದಿ ಇರುತ್ತಾರೆ ಎಂದರೆ ಸರಿ. ಜೆ.ಎಸ್.ಎಸ್. ಆಸ್ಪತ್ರೆಯ ಮುಖ್ಯ ದ್ವಾರದ ಹತ್ತಿರ ಆಸ್ಪತ್ರೆಗೆ ಸಂಬಂಧಿಸಿದ ಸೆಕ್ಯುರಿಟಿ ಸಿಬ್ಬಂದಿ ಇರುತ್ತಾರೆ ಎಂದರೆ ಸರಿ. 101 ಗಣಪತಿ ದೇವಸ್ಥಾನದ ಹತ್ತಿರವೂ ಸಹ ರಾತ್ರಿ ವೇಳೆಯಲ್ಲಿ ಟೀ ಮಾರಾಟ ಮಾಡುತ್ತಾರೆ ಎಂದರೆ ಸರಿಯಲ್ಲ. ಆ ಸ್ಥಳ ದಲ್ಲಿ ಫಾಸ್ಟ್ ಫುಡ್ ಗಳು ಸುಮಾರು ರಾತ್ರಿ 1.00 ಗಂಟೆಯವರೆಗೆ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲಿ ಟೀ ಮಾರಾಟ ಮಾಡುತ್ತಿದ್ದರು ಮತ್ತು ಫಾಸ್ಟ್ ಫುಡ್ ಗಳು ಸುಮಾರು ರಾತ್ರಿ 1.00 ಗಂಟೆಯವರೆಗೆ ಇದ್ದರೂ ಸಹ ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಗ್ರಹಾರ ಸರ್ಕಲ್ ನಲ್ಲಿಯೂ ಸಹ ರಾತ್ರಿ ವೇಳೆಯಲ್ಲಿ ಟೀ ಮಾರಾಟ ಮಾಡುತ್ತಾರೆ ಎಂದರೆ ಸರಿಯಲ್ಲ. ಅಲ್ಲಿ ಮಾರಾಟ ಮಾಡುತ್ತಿದ್ದರೂ ಸಹ ಮಾರಾಟ ಮಾಡುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಿರ್ಯಾದುದಾರರು ಠಾಣೆಗೆ ಬಂದು ದೂರು ಕೊಡುವ ಪೂರ್ವದಲ್ಲಿ ಘಟನೆ ಬಗ್ಗೆ ನಮಗೆ ಮಾಹಿತಿ ಇರಲಿಲ್ಲ. ದೂರನ್ನು ಕೊಡಲು ಏಕೆ ತಡ ಆಗಿರುತ್ತದೆ ಎನ್ನುವ ಬಗ್ಗೆ

ಪಿರ್ಯಾದುದಾರರು ಬಾನವಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡು ಬಂದು ದೂರು ಕೊಡಲು ತಡ ಆಗಿರುತ್ತದೆ ಎಂದು ಹೇಳಿರುತ್ತಾರೆ. ಘಟನಾ ಸ್ಥಳದಿಂದ ಬಾನವಿ ಆಸ್ಪತ್ರೆಗೆ ಹೋಗಬೇಕಾದರೆ ನಮ್ಮ ಠಾಣೆಯ ಮುಂದಿನಿಂದಲೂ ಹೋಗಬೇಕು ಎಂದರೆ ಸರಿಯಲ್ಲ ಬೇರೆ ರಸ್ತೆಯಿಂದಲೂ ಹೋಗಬಹುದು ಅಂದರೆ ಗಾಡಿ ಚೌಕ ದ ಕಡೆಯಿಂದ ಹೋಗಬಹುದು. ನಮ್ಮ ಠಾಣೆಯ ಹತ್ತಿರದಲ್ಲಿ 101 ಗಣಪತಿ ದೇವಸ್ಥಾನ ಇರುತ್ತದೆ ಎಂದರೆ ಸರಿ. ಈ ದೇವಸ್ಥಾನದ ಪಕ್ಕದಲ್ಲಿಯೇ ಪಿರ್ಯಾದುದಾರರ ಮನೆ ಇರುತ್ತದೆ ಎಂದರೆ ಸರಿಯಲ್ಲ. ಪಿರ್ಯಾದುದಾರರು ಬಾನವಿ ಆಸ್ಪತ್ರೆಯನ್ನು ಹೊರತುಪಡಿಸಿ ಚಿಕಿತ್ಸೆ ಸಲುವಾಗಿ ಬೇರೆ ಆಸ್ಪತ್ರೆಗೆ ಹೋಗಿದ್ದರ ಬಗ್ಗೆ ಹೇಳಿರಲಿಲ್ಲ. ನಿಪಿ–1 ರಲ್ಲಿ ದೂರನ್ನು ಕೊಡಲು ಏಕೆ ವಿಳಂಭ ಆಗಿರುತ್ತದೆ ಎನ್ನುವ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಬಾನವಿ ಆಸ್ಪತ್ರೆಯ ದಾಖಲಾತಿ ಪ್ರಕಾರ ಯಾವ ವ್ಯಕ್ತಿ ಹಲ್ಲೆ ಮಾಡಿರುತ್ತಾನೆ ಎನ್ನುವ ಬಗ್ಗೆ ಉಲ್ಲೇಖ ಇರುವುದಿಲ್ಲ ಎಂದರೆ ಸರಿ.

ನಿಪಿ–1 ದೂರನ್ನು ನಮ್ಮ ಪೊಲೀಸಿನವರ ಹೇಳಿಕೆಯ ಮೇರೆಗೆ ತಯಾರಿಸಿರುತ್ತದೆ ಎಂದರೆ ಸರಿಯಲ್ಲ. ನಾನು ಹೇಳುವಂತಹ ಕೃತ್ಯದ ಸ್ಥಳ ದಲ್ಲಿ ಯಾವಾಗಲೂ ಜನರು ಇರುತ್ತಾರೆ ಎಂದರೆ ಸರಿ. ಮತ್ತು ಆಟೋ ನಿಲ್ದಾಣವು ಇರುತ್ತದೆ ಎಂದರೆ ಸರಿ. ಒಂದು ವೇಳೆ ಆ ಸ್ಥಳ ದಲ್ಲಿ ಯಾವುದಾದರೂ ಘಟನೆ ಆಗಿದ್ದರೆ ಕೂಡಲೇ ನಮಗೆ ಗೊತ್ತಾಗುತ್ತಿತ್ತು, ಯಾವುದೇ ಘಟನೆ ಆಗದೇ ಇದ್ದುದರಿಂದಲೇ ನಮಗೆ ಮಾಹಿತಿ ಬಂದಿರುವುದಿಲ್ಲ ಎಂದರೆ

ಸರಿಯಲ್ಲ. ನಾನು ನಿಪಿ–2 ಅನ್ನು ಠಾಣೆಯಲ್ಲಿ ಕುಳಿತು ತಯಾರು ಮಾಡಿರುವುದರಿಂದ ತಿಂಗಳನ್ನು ತಿದ್ದಿರುತ್ತೇನೆ ಎಂದರೆ ಸರಿಯಲ್ಲ. ನಾನು ಈಗ ನೋಡುತ್ತಿರುವ ಎಂ.ಒ–1 ರೇಜರ್ ಹೊಸ ರೇಜರ್ ಇದ್ದು ಅದನ್ನು ಕೇಸಿಗೋಸ್ಕರ ಸೃಷ್ಟಿಮಾಡಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರು ನನ್ನ ಮುಂದೆ ನಿಪಿ– 3 ರಿಂದ 8 ರಂತೆ ಹೇಳಿಕೆ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ.

ದಿನಾಂಕ 31.10.2020 ರಂದು ನಾನು FSL ಗೆ ಎಂ.ಒ–1 ರಿಂದ 4 ಅನ್ನು ಕಳುಹಿಸಿಕೊಟ್ಟಿದ್ದೆ. ನಾನು ದಿನಾಂಕ 06.10.2020 ರಂದು ಎಂ.ಒ–2 ರಿಂದ 4 ಅನ್ನು ಅಮಾನತ್ತು ಪಡಿಸಿಕೊಂಡಿದ್ದು ಎಂ.ಒ–1 ಅನ್ನು ದಿನಾಂಕ 21.10.2020 ರಂದು ಅಮಾನತ್ತು ಪಡಿಸಿಕೊಂಡಿದ್ದು FSL ಗೆ ಕಳುಹಿಸಲು ಏಕೆ ವಿಳಂಬ ಆಗಿರುತ್ತದೆ ಎಂದರೆ ಕೆಲಸದ ಒತ್ತಡ ಇದುದರಿಂದ ಸದರಿಯವುಗಳನ್ನು ದಿನಾಂಕ 31.10.2020 ರಂದು FSL ಗೆ ಕಳುಹಿಸಿಕೊಟ್ಟಿದ್ದೆ. ದಿನಾಂಕ 25.11.2020 ರಂದು ರೇಜರ್ ಅನ್ನು ಬಾನವಿ ಆಸ್ಪತ್ರೆಯ ವೈಧ್ಯಾಧಿಕಾರಿಯವರಿಗೆ ಈ ರೇಜರ್ ನಿಂದಲೇ ಸದರಿ ಗಾಯವೂ ಆಗಿರಬಹುದೇ ಎಂದು ಸ್ಪಷ್ಟ ಅಭಿಪ್ರಾಯವನ್ನು ನೀಡುವಂತೆ ಮನವಿ ಪತ್ರದೊಂದಿಗೆ ರೇಜರ್ ಅನ್ನು ಕಳುಹಿಸಿಕೊಟ್ಟಿದ್ದೆ. ಈ ಸಂಬಂಧವಾಗಿ ನ್ಯಾಯಾಲಯಕ್ಕೆ ಮನವಿಪತ್ರ ಕೊಟ್ಟಿಲ್ಲ ಎಂದರೆ ಸರಿ. ನಾನು ವೈಧ್ಯಾಧಿಕಾರಿಯವರು ರೇಜರ್ ಅನ್ನು ಪರಿಶೀಲನೆ ಮಾಡಿರುತ್ತಾರೆ ಎನ್ನುವ ಬಗ್ಗೆ ದಾಖಲಾತಿ ಕೊಟ್ಟಿರುತ್ತೇನೆ.

ನಾನು ಹೇಳಿದಂತೆ ಆರೋಪಿತರು ಯಾವುದೇ ಗಲಾಟೆ ಮಾಡಿಲ್ಲ ನಮ್ಮ ಪೊಲೀಸಿನವರ ಹೇಳಿಕೆಯ ಆಧಾರದ ಮೇಲೆ ಪಿರ್ಯಾದಿಯಲ್ಲಿ ಆರೋಪಿತರ ಹೆಸರನ್ನು ಬರೆದಿರುತ್ತದೆ ಎಂದರೆ ಸರಿಯಲ್ಲ. ನಾನು ಆರೋಪಿತರ ವಿರುದ್ಧವಾಗಿ ಸುಳ್ಳು ದೂರನ್ನು ದಾಖಲು ಮಾಡಿಕೊಂಡು ಸುಳ್ಳು ದೋಷರೋಪಣಾ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–13 ರಲ್ಲಿ ಅಪರಿಚಿತ 3 ವ್ಯಕ್ತಿಗಳು ಎಂದು ಉಲ್ಲೇಖ ಇರುತ್ತದೆ ಎಂದರೆ ಸರಿ. ನಾನು ನಿಪಿ–13 ರಲ್ಲಿ 3 ಜನ ಅಪರಿಚಿತ ವ್ಯಕ್ತಿಗಳು ಎಂದು ಉಲ್ಲೇಖ ಮಾಡಿರುವ ಬಗ್ಗೆ ತನಿಖೆ ಮಾಡಿರುವುದಿಲ್ಲ.

**ಪಾಟೀ ಸವಾಲುಃ 2 ನೇ ಆರೋಪಿ ಪರ ವಕೀಲರಿಂದ** :

2 ನೇ ಆರೋಪಿ ಪರ ವಕೀಲು 1 ನೇ ಆರೋಪಿ ಪರ ವಕೀಲರು ಮಾಡಿರುವ ಪಾಟೀ ಸವಾಲಿನಂತೆಯೇ ತನ್ನ ಪಾಟೀ ಸವಾಲು ಇರುತ್ತದೆ ಎಂದು ತಿಳಿಸಿರುತ್ತಾರೆ.

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**